ಸಂಯುಕ್ತ ಕರ್ನಾಟಕ

# ಕೆಎಸ್‌ಎನ್ ಕಾವ್ಯಗಳಲ್ಲಿ ಶೃಂಗಾರದ ಮಿಳಿತ: ಕಂಬಾರ್

**ಬೆಂಗಳೂರು, ಫೆ. 15:** ಕಥೆ ಕಾದಂಬರಿಗಳ ಮೂಲಕ ಮಾತ್ರ ರಸಾನುಭಾವ ಸಾಧ್ಯ ಎನ್ನುವ ಕಲ್ಪನೆಯನ್ನು ಸುಳ್ಳು ಮಾಡಿ, ಕವಿತೆಗಳಲ್ಲಿಯೇ ಎಲ್ಲ ರೀತಿಯ ಉತ್ಕೃಷ್ಟ ಭಾವವನ್ನು ಸೃಷ್ಟಿಸಿದ ಮಹಾನ್ ಕವಿ ಕೆ.ಎಸ್.ನರಸಿಂಹಸ್ವಾಮಿ ಎಂದು ಜ್ಞಾನಪೀಠ ಪುರಸ್ಕೃತ ಸಾಹಿತಿ ಚಂದ್ರಶೇಖರ್ ಕಂಬಾರ್ ಬಣ್ಣಿಸಿದರು.

ಸಾಹಿತ್ಯ ಅಕಾಡೆಮಿ ಹಾಗೂ ಜೈನ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಗರದಲ್ಲಿ ಆಯೋಜಿಸಿದ್ದ ಕೆ.ಎಸ್.ಎನ್ ಜನ್ಮಶತಮಾನೋತ್ಸವ ಮತ್ತು ಎರಡು ದಿನದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾವಗೀತೆಗಳ ಪರಿಧಿ ತೀರಾ ಚಿಕ್ಕದು. ಎಲ್ಲ ಭಾವಗಳನ್ನು ಒಂದೆಡೆ ಕೂಡಿ ಹಾಕಿ ಅರ್ಥ ಬದ್ಧವಾದ ಸಾಲುಗಳನ್ನು ರಚಿಸುವುದು ತುಂಬಾ ಕಷ್ಟ. ಆದರೆ ಇವರ ರಚಿಸಿದ ಎಲ್ಲ ಕಾವ್ಯಗಳ ಸಾಲುಗಳು ಪರಿಪೂರ್ಣ ಪ್ರೀತಿ ವ್ಯಕ್ತಪಡಿಸುವ ಸಾಲುಗಳಾಗಿಯೇ ಉದ್ಭವವಾಗಿವೆ. ಇದು ಎಲ್ಲರಿಂದಲೂ ಸಾಧ್ಯವಿಲ್ಲ ಎಂದು ವಿಶ್ಲೇಷಿಸಿದರು.

ಕೆಎಸ್‌ಎನ್ ಶುದ್ಧವಾದ, ಕೋಮಲವಾದ ಪ್ರೇಮ ಕವಿತೆಗಳನ್ನು ದಂಪತಿಗಳಿಗಾಗಿ ಬರೆಯುತ್ತಿದ್ದರು. ಅದು ಕೇವಲ ಮದುವೆಯಾದ ಗಂಡ ಹೆಂಡತಿಯರಿಗೆ ಮಾತ್ರ ಎಂದು ನಗೆ ಚಟಾಕಿ ಬೀಸುತ್ತಿದ್ದಂತೆಯೇ ನೆರದಿದ್ದವರನ್ನೆಲ್ಲಾ ನಗೆಯ ಅಲೆಯಲ್ಲಿ ತೇಲುವಂತೆ ಮಾಡಿತು.

ದಾಂಪತ್ಯವನ್ನು ಪ್ರತ್ಯಕವಾಗಿ, ಮಾಧುರ್ಯ ಭರಿತವಾಗಿ ವರ್ಣಿಸಿ ಕನ್ನಡ ಸಾಹಿತ್ಯದಲ್ಲಿ ಹೊಸ ಗಾಳಿಯನ್ನು ಬೀಸಿದ ಇವರ ಸರಿಸಾಟಿ ಯಾರು ಇಲ್ಲವೇಂದು ಹೇಳಿದರು.

ಖ್ಯಾತ ಸಾಹಿತಿ ಕಮಲಾ ಹಂಪನಾ ಮಾತನಾಡಿ, ಹೆಣ್ಣಿನಲ್ಲಿನ ಸುಕೋಮಲತೆಯ ಭಾವನೆಯನ್ನು ಕೆಎಸ್‌ಎನ್ ಹಾಗೇ ಮತ್ತ್ಯಾರು ವ್ಯಕ್ತಪಡಿಸಿಲ್ಲ ಎಂದು ತಿಳಿಸಿದರು.



**ಜೈನ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಡಾ.ಕೆ.ಎಸ್. ನರಸಿಂಹಸ್ವಾಮಿ ಜನ್ಮಶತಮಾನೋತ್ಸವ ವಿಚಾರ ಸಂಕಿರಣವನ್ನು ಜ್ಞಾನಪೀಠ ಪುರಸ್ಕೃತ ಚಂದ್ರಶೇಖರ್ ಕಂಬಾರ ಉದ್ಘಾಟಿಸಿದರು. ಸಾಹಿತಿ ಕಮಲಾ ಹಂಪನಾ, ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ಕೆ.ಶ್ರೀನಿವಾಸರಾವ್ ಉಪಸ್ಥಿತರಿದ್ದರು.**

ಕಾವ್ಯಗಳಲ್ಲಿ ಹೆಚ್ಚಾಗಿ ಸಂಜ್ಞೆಗಳನ್ನು ಬಳಸುವ ಅವರ ಶೈಲಿಯು ಅಂದಿನ ಕಾಲದಲ್ಲಿ ಗಂಡ ಹೆಂಡತಿಯರಿಗೆ ಮಾತನಾಡಲು ಕೂಡ ಎಷ್ಟೊಂದು ಅಡೆತಡೆಗಳು ಇರುತ್ತಿದ್ದವು ಎಂಬ ಅನುಭವನ್ನು ನೀಡುತ್ತವೆ. ಅವರು ಸದಾ ನನ್ನ ಕವಿತೆಗಳು ಪ್ರೇಮ ಗೀತೆಗಳಲ್ಲ ಪರಿಶುದ್ಧವಾದ ದಾಂಪತ್ಯ ಗೀತೆಗಳು ಎನ್ನುತ್ತಿದ್ದರು ಎಂದು ತಮ್ಮ ಹಾಗೂ ಕೆಎಸ್‌ಎನ್ ಮಧ್ಯೆದ ಒಡನಾಟವನ್ನು ಮೇಲಕುಹಾಕಿದರು.

ಇಂದಿನ ಯುವ ಜನತೆ ಅವರ ಕಾವ್ಯಗಳನ್ನು ಕೇಳುತ್ತಾ ಆ ಮಾಧುರ್ಯವನ್ನು ಸವಿಯಬೇಕು ಆ ನಿಟ್ಟಿನಲ್ಲಿ ಕೆಎಸ್‌ಎನ್ ಕವಿತೆಗಳನ್ನು ಹೇಳುವಂತಹ ಕಾರ್ಯಕ್ರಮಗಳ ಆಯೋಜನೆಯಾಗಬೇಕೆಂಬ ಆಶಯ ವ್ಯಕ್ತಪಡಿಸಿದರು.

ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿ, ನಿತ್ಯದ ಬದುಕಿನ ಪ್ರತಿ ಕ್ಷಣವನ್ನು ಚಿತ್ರಿಸುತ್ತಿದ್ದ ದೈನಿಕ ಕವಿ ಕೆಎಸ್‌ಎನ್ ಚರಿತ್ರೆಯನ್ನು ಕವಿತೆಗಳ ಮೂಲಕ ಹೇಳಿದರು ಎಂದು ಬಣ್ಣಿಸಿದರು. ಕಾವ್ಯಗಳಲ್ಲಿ ಶೃಂಗಾರವನ್ನು ಅಳವಡಿಸುವುದು ಅತ್ಯಂತ ಕಷ್ಟ.

ಅದು ಕೊಂಚ ಹೆಚ್ಚಾದರೆ ಅಶ್ಲೀಲವೇನಿಸುವುದು, ಕಡಿಮೆ ಯಾದರೆ ಕಾವ್ಯ ನಿರಸವಾಗುವುದು. ಹೀಗೆ ಹದವಾಗಿ ಶೃಂಗಾರವನ್ನು ಬಳಸಿಕೊಳ್ಳುವುದರಲ್ಲಿ ಅವರು ನಿಸ್ಸೀಮರಾಗಿದ್ದರು.

ಕುಮಾರವ್ಯಾಸನ ನಂತರ ವಿಮರ್ಶಕರ ಮನ್ನಣೆ ಮತ್ತು ಜನರ ಪ್ರೀತಿ ಎರಡನ್ನು ಸರಿಸಮಾನವಾಗಿ ಪಡೆದುಕೊಂಡ ಏಕೈಕ ಕವಿ ಕೆಎಸ್‌ಎನ್. ಪ್ರೇಮ ಎಂದರೆ ಹಾಸ್ಯವಲ್ಲ ಅದು ಜೀವನದ ಸಾರ ಎಂದು ತೋರಿಸಿಕೊಟ್ಟರು ಎಂದು ಹೇಳಿದರು. ಟಿ.ಎಸ್.ನಾಗಾಭರಣ, ಎಂ.ವಿ.ವೆಂಕಟೇಶ್ ಮೂರ್ತಿ, ಶಾಂತಿ ಅಯ್ಯರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.